ಬಿಜಾಪುರ ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಜಗದಂಬಾ ಸಂಸ್ಥೆಯವರು ನಡೆಸುತ್ತಿರುವ ವಿದ್ಯಾರ್ಥಿನಿಲಯಗಳ ಬಗ್ಗೆ

೭೦೩. (೧೫೨೨) ಶ್ರೀ ಮಲ್ಲನಗೌಡ ಬಿರಾದಾರ್ (ಇಂದಗಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಬಿಜಾಪುರ ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಜನದಂಬಾ ಸಂಸ್ಥೆಯವರು ನಡೆಸುತ್ತಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ? ಈ ಸಂಸ್ಥೆಯನ್ನು ನಡೆಸುವವರು ಯಾರು ?

ಆ) ಈ ವಿದ್ಯಾರ್ಥಿ ನಿಲಯಗಳು ಇಲ್ಲಿಯವರೆಗೆ ಸರಕಾರದಿಂದ ಪಡೆದುಕೊಂಡ ಅನುದಾನ ಎಷ್ಟು

ಇ) ಈ ವಿದ್ಯಾರ್ಥಿನಿಲಯಗಳು ಸರಿಯಾಗಿ ನಡೆಯುತ್ತಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಇವು ಖೋಟಾ ಸಂಸ್ಥೆಗಳಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) (೧) ಗುಲ್ಬರ್ಗಾದಲ್ಲಿ ಯಾವುದೂ ಇಲ್ಲ.

(೨) ಬಿಜಾಪುರ ಜಿಲ್ಲೆಯಲ್ಲಿ ಜಗದಂಬಾ ಸಂಸ್ಥೆಯವರು ಎರಡು ಅನುಧಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ನಡೆಯುತ್ತಿವೆ, ಅವುಗಳು.—

(೧) ಕೆ.ಟಿ. ರಾಥೋಡ್ ಉಚಿತ ಪ್ರಸಾದ ನಿಲಯ, ಹಿಟ್ಟಿನ ಹಳ್ಳಿ, ಲಂಬಾಣಿ, ತಾಂಡ, ಸಿಂಡಗಿ ತಾಲ್ಲೂಕು, ಬಿಜಾಪುರ.

(೨) ಶ್ರೀ ಜಗದಾಂಬ ಫ್ರೀ ಬೋರ್ಡಿಂಗ್, ತಾಂಬಾ, ಇಂಡಿ ತಾಲ್ಲೂಕು, ಬಿಜಾಪುರ, ನಿರ್ವಾಹಕ ಮಂಡಳಿಯ ವಿವರಗಳನ್ನು ಲಗತ್ತಿಸಿದೆ.

	೧೯೯೨–೯೩	೯೩–೯೪	೯೪–೯೫	ಒಟ್ಟು
	ರೂ.	ರೂ.	ರೂ.	ರೂ.
ಅ) (೧) ಹಿಟ್ಟಿನ ಹಳ್ಳಿ, ಲಂಬಾಣಿ, ತಾಂಡ	೪೩,೮೭೫	೫೭,೫೫೦	೮೩,೦೭೫	೧,೮೪,೪೫೦
(೨) ಶ್ರೀ ಜಗದಾಂಬ ಫ್ರೀ ಬೋರ್ಡಿಂಗ್, ತಾಂಬಾ :	೩೩,೯೩೦	೫೪,೮೭೧	೨೮,೭೫೧	

ಆ) ಇಲ್ಲ.

ಈ) ಉದ್ಭವಿಸುವುದಿಲ್ಲ.

ನಿರ್ವಾಹಕ ಮಂಡಳಿಯ ವಿವರ ಈ ಕೆಳಗಿನಂತೆ ಇದೆ :

೧) ಕೆ. ಟಿ. ರಾಥೋಡ್ ಉಚಿತ ಪ್ರಸಾದ ನಿಲಯ, ಹಿಟ್ಟಿನ ಹಳ್ಳಿ, ಲಂಬಾಣಿ, ತಾಂಡ, ಸಿಂದಗಿ ತಾಲ್ಲೂಕು, ಬಿಜಾಪುರ.

ಶ್ರೀ ವಿ.ಪಿ. ದೊಡ್ಡಮನಿ	—	ಛೇರ್‌ಮನ್
ಶ್ರೀ ಬಿ.ಬಿ. ಆಂಗಡಿ	—	ವೈಸ್ ಛೇರ್‌ಮನ್
ಶ್ರೀ ಕೆ.ಕೆ. ದೊಡ್ಡಮನಿ	—	ಕಾರ್ಯದರ್ಶಿ
ಶ್ರೀ ಕೆ.ಜಿ. ಮಂಜಿ	—	ಖಜಾಂಚಿ
ಶ್ರೀ ಎಲ್.ಎಸ್. ಮಾದಾರ	—	ಸದಸ್ಯ
ಶ್ರೀ ಟಿ.ಬಿ. ರಾಥೋಡ್	—	ಸದಸ್ಯ
ಶ್ರೀ ಟಿ.ಆರ್. ಚವಾಣ್	—	ಸದಸ್ಯ

೨) ಶ್ರೀ ಜಗದಾಂಬ ಫ್ರೀ ಬೋರ್ಡಿಂಗ್, ತಾಂಬಾ, ಇಂಡಿ, ತಾಲ್ಲೂಕು, ಬಿಜಾಪುರ.

ಶ್ರೀ ಕೆ.ಆರ್. ಚವಾಣ್	—	ಛೇರ್‌ಮನ್
ಶ್ರೀ ಟಿ.ಬಿ.. ಆಂಗಡಿ	—	ವೈಸ್ ಛೆ ರ್‌ಮನ್
ಶ್ರೀ ಕೆ.ಕೆ. ದೊಡ್ಡಮನಿ	—	ಕಾರ್ಯದರ್ಶಿ
ಶ್ರೀ ಬಿ.ಎ. ಮಾದಾರ	—	ಸದಸ್ಯ
ಶ್ರೀ ಎಸ್.ಎಫ್. ಚವಾಣ	—	"
ಶ್ರೀ ಕೆ.ಎಸ್. ರಾಥೋಡ್	—	"
ಶ್ರೀ ಕೆ.ಸಿ. ರಾಥೋಡ್	—	"

ಹುಬ್ಬಳ್ಳಿಯಲ್ಲಿ ವಿಮಾನ ಇಳಿದಾಣದ ಬಗ್ಗೆ

೭೦೪ (೧೧೪೫) ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್(ಅಥಣಿ).–ಮಾನ್ಯ **ಲೋಕೋಪಯೋಗಿ** ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ೧೯೬೦ನೇ ಸಾಲಿನಲ್ಲಿ ಹುಬ್ಬಳಿಯಲ್ಲಿ ವಿಮಾನ ಇಳಿದಾಣಕ್ಕೆ ಅನುಮತಿ ದೊರೆತು ಹುಬ್ಬಳ್ಳಿ ಧಾರವಾಡ ನಗರ ಪಾಲಿಕೆಯವರು ೪ ಎಕರೆ ಪ್ರದೇಶವನ್ನು ವಹಿಸಿಕೊಂಡು ನಾಗರೀಕ ವಿಮಾನಯಾನ ಸಂಸ್ಥೆಗೆ ವಹಿಸಿಕೊಟ್ಟಿರುವುದು ಮತ್ತು ಆಯವ್ಯಯದಲ್ಲಿ ಹಣ ದೊರಕಿಸಿ ಕೊಟ್ಟಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಹುಬ್ಬಳ್ಳಿ ನಗರಕ್ಕೆ ವಾಯುಧೂತ ಸೌಲಭ್ಯವನ್ನು ಒದಗಿಸುವುದರ ಬಗ್ಗೆ ಕೇಂದ್ರ ಸರಕಾರದವರ ಅಭಿಪ್ರಾಯವನ್ನು ಸರ್ಕಾರದವರು ತಿಳಿಸುವರೆ :—

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಬಂದಿದೆ.

ಆ) ಕೇಂದ್ರ ಸರಕಾರದವರು ಹುಬ್ಬಳ್ಳಿಯೂ ಸೇರಿದಂತೆ ವಾಯುದೂತ ಸೌಲಭ್ಯವನ್ನು ಒದಗಿಸುವುದಾಗಿ ಭರವಸೆ ನೀಡಿದ್ದಾರೆ. ಈ ಭರವಸೆಯೊಂದಿಗೆ ರಾಜ್ಯ ಸರ್ಕಾರವು ಹುಬ್ಬಳ್ಳಿ ವಾಯು ನಿಲ್ದಾಣವನ್ನು ರಾಜ್ಯಸರ್ಕಾರದ ಖರ್ಚಿನಿಂದ ಅಭಿವೃದ್ಧಿಗೊಳಿಸಿ ವಾಯು ದೂತ ವಿಮಾನ ಸಂಚಾರಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸತಕ್ಕದ್ದು ಎಂಬ ಷರತ್ತನ್ನು ಹಾಕಿರುತ್ತಾರೆ. ಈ ಷರತ್ತಾನ್ವಯ ಈಗಾಗಲೇ ಹುಬ್ಬಳ್ಳಿ ವಿಮಾನ ಇಳಿದಾಣದ ಅಭಿವೃದ್ಧಿ ಕಾರ್ಯಗಳನ್ನು ೯೯-೮೫ನೇ ಲಕ್ಷ ರೂ. ಗಳ ವೆಚ್ಚದಲ್ಲಿ ಮಂಜೂರು ಮಾಡಿದೆ. ಈ ಕಾಮಗಾರಿಯನ್ನು ಹುಬ್ಬಳ್ಳಿಯ ಅಧೀಕ್ಷಕ ಅಭಿಯಂತರವರು ಕೈಗೊಂಡಿದ್ದಾರೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ೧೦.೦೦ ಲಕ್ಷ ರೂಪಾಯಿಯನ್ನು ಒದಗಿಸಲಾಗಿದೆ.

ಮೀಸಲಾತಿ ಹೆಚ್ಚಿಸುವ ಬಗ್ಗೆ

೭೦೫ (೧೫೦೦) ಶ್ರೀ ಗೋಪಾಲ ಪುಕುಂದ ಕಾನಡೆ (ಶಿರಸಿ).—ಮಾನ್ಯ ಸಮಾಜ **ಕಲ್ಯಾಣ** ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹರಿಜನ-ಗಿರಿಜನರಿಗೆ ಶೇಕಡ ೧೮ ಮೀಸಲಾತಿ ದೊರೆತಿದ್ದು ಯಾವಾಗ ಹಾಗೂ ರಾಜ್ಯದ ಆಂದಿನ ಜನಸಂಖ್ಯೆ ಎಷ್ಟಿತ್ತು ?

ಆ) ಈಗಿನ ಜನಸಂಖ್ಯೆಗೆ ಅನುಗುಣವಾಗಿ ಶೇಕಡ ವಾರನ್ನು ಹೆಚ್ಚಿಸದಿರಲು ಕಾರಣಗಳೇನು ?

ಇ) ಅರ್ಹ ಮೀಸಲಾತಿಯನ್ನು ರಾಜ್ಯದಲ್ಲಿ ಹೆಚ್ಚಿಸಲು ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು ?

ಈ) ಮೇಲಿನ ಮೀಸಲಾತಿಯನ್ನು ಯಾವಾಗ ಹೆಚ್ಚಿಸಲಾಗುವುದು?

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—